ವಿಷಯ:- ಸೂರಶೆಟ್ಟಿ ಕೊಪ್ಪ ಗ್ರಾಮದಲ್ಲಿ ಸರ್ಕಾರಿ ಜೂನಿಯರ್ ಕಾಲೇಜು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೫೮:- (೨೮೮)
ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ)
ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಲಘಟಗಿ ತಾಲ್ಲೂಕು ಸೂರಶೆಟ್ಟಿ ಕೊಪ್ಪ ಗ್ರಾಮದಲ್ಲಿ ಸರ್ಕಾರಿ ಜೂನಿಯರ್ ಕಾಲೇಜು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?
ಆ) ಹಾಗಿದ್ದಲ್ಲಿ ೧೯೯೩-೯೪ನೇ ಸಾಲಿನಲ್ಲಿ ಮೇಲ್ಕಂಡ ಗ್ರಾಮದಲ್ಲಿ ಸರ್ಕಾರಿ ಜೂನಿಯರ್ ಕಾಲೇಜನ್ನು ಸರ್ಕಾರ ಮಂಜೂರು ಮಾಡಲಾಗುವುದೇ?

ಡಾ. ಹೆಗ್ಗಪ್ಪ ಡಿ. ಲಮಾಣಿ
(ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು.)

ಬಂದಿದೆ.
ಪರಿಶೀಲನೆ ಮಾಡಲಾಗುತ್ತಿದೆ.

ವಿಷಯ:- ಪ್ರತಿ ಹೆದ್ದಾರಿಯಲ್ಲಿ ಚಿಕಿತ್ಸಾ ಕೇಂದ್ರ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೫೯:- (೭೦೯)
ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು)
ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟು ಉತ್ತರಿಸುವರೆ?

೧) ಪ್ರತಿ ಹೆದ್ದಾರಿಯಲ್ಲಿ ಚಿಕಿತ್ಸಾ ಕೇಂದ್ರಗಳನ್ನು ತೆರೆಯಲು ಸರ್ಕಾರವು ಆಲೋಚಿಸಿರುವುದೇ?

ಶ್ರೀ.ಎಂ. ವೀರಪ್ಪ ಮೊಯಿಲಿ,
(ಮುಖ್ಯ ಮಂತ್ರಿಗಳು)

ಸದ್ಯಕ್ಕೆ ಇಲ್ಲ.

ವಿಷಯ:- ಕೆ.ಎಂ.ಸಿ. ಆಸ್ಪತ್ರೆಯಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೬೦:- (೪೩೦)
ಶ್ರೀ ಶಿವಾನಂದ ಹೆಚ್. ಕಾಜಲಗಿ (ಬೈಲಹೊಂಗಲ)
ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಬ್ಬಳ್ಳಿ ಕೆ.ಎಂ.ಸಿ. ಆಸ್ಪತ್ರೆಯಲ್ಲಿ ವಿವಿಧ ವಿಭಾಗಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು?
ಆ) ಹುದ್ದೆಗಳು ಎಷ್ಟು ದಿವಸಗಳಿಂದ ಖಾಲಿ ಇರುತ್ತವೆ?
ಇ) ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು ಮತ್ತು ಇನ್ನು ಎಷ್ಟು ದಿವಸಗಳಲ್ಲಿ ಈ ಹುದ್ದೆಗಳನ್ನು ತುಂಬಲಾಗುವುದು?

ಶ್ರೀ.ಜೆ. ರಾಮಕೃಷ್ಣ
(ವೈದ್ಯಕೀಯ ಶಿಕ್ಷಣ ಸಚಿವರು.)

ಪ್ರಾಧ್ಯಪಕರು	+೧೬
ಸಹಾಯಕ ಪ್ರಾಧ್ಯಾಪಕರು	-೨೩
ಉಪನ್ಯಾಸಕರು	-೨೮

ಈ ಹುದ್ದೆಗಳು ಕೆ.ಎಂ.ಸಿ. ಆಸ್ಪತ್ರೆ, ಹುಬ್ಬಳ್ಳಿ, ಇಲ್ಲಿ ಒಂದು ವರ್ಷದಿಂದ ಖಾಲಿ ಇರುತ್ತವೆ.

ಪ್ರಾಧ್ಯಾಪಕರ ಹುದ್ದೆಗಳನ್ನು ಅರ್ಹರಾದ ಸಹಾಯಕ ಪ್ರಾಧ್ಯಾಪಕರಿಗೆ ಬಡ್ತಿ ನೀಡಿ ತುಂಬಲಾಗುತ್ತಿದೆ. ಅರ್ಹ ಉಪನ್ಯಾಸಕರಿಗೆ ಸಹಾಯಕ ಪ್ರಾಧ್ಯಾಪಕರಾಗಿ ಬಡ್ತಿ ನೀಡುವ ಬಗ್ಗೆ ಪ್ರಸ್ತಾವನೆಗಳನ್ನು ಪರಿಶೀಲಿಸಲಾಗುತ್ತಿದೆ. ೧೯೮೨ರಲ್ಲಿ ಉಪನ್ಯಾಸಕರ ಹುದ್ದೆಗಳಿಗೆ ಕರ್ನಾಟಕ ಲೋಕ ಸೇವಾ ಆಯೋಗದಿಂದ ಆಯ್ಕೆಯಾದವರ ಬಗ್ಗೆ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದು ಸದರಿ ವಿಷಯವು ಶ್ರೇಷ್ಠ ನ್ಯಾಯಾಲಯದಲ್ಲಿ ಬಾಕಿ ಇರುತ್ತವೆ. ಆದುದರಿಂದ ಉಪನ್ಯಾಸಕರುಗಳ ಹುದ್ದೆಗಳನ್ನು ಅರ್ಹರಾದ ಸಹಾಯಕ ಶಸ್ತ್ರ ಚಿಕಿತ್ಸಕರಿಗೆ ವೃಂದ ಬದಲಾವಣೆ ನೀಡಿ ತುಂಬಲಾಗುತ್ತಿದೆ. ಹಾಗೂ ಅರ್ಹರಾದ ಸಹಾಯಕ ಶಸ್ತ್ರ ಚಿಕಿತ್ಸಕರನ್ನು ಅವರುಗಳು ಪಡೆದಿರುವ ಸ್ನಾತಕೋತ್ತರ ವಿಷಯಗಳ ಆಧಾರದ ಮೇಲೆ ಅನ್ಯಸೇವೆಯ ಮೇಲೆ ಉಪನ್ಯಾಸಕರಾಗಿ ನೇಮಕ ಮಾಡಲಾಗುತ್ತಿದೆ. ಶ್ರೇಷ್ಠ ನ್ಯಾಯಾಲಯವು ಸದರಿ ವಿಷಯದಲ್ಲಿ ಅಂತಿಮ ತೀರ್ಪು ನೀಡಿದ ತಕ್ಷಣ ಉಪನ್ಯಾಸಕರ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ತುಂಬಲಾಗುತ್ತದೆ.

ವಿಷಯ:- ರಾಜ್ಯದಲ್ಲಿ ನಗರ ಸಭೆ ಕಾರ್ಪೊರೇಶನ್ ಹಾಗೂ ಮಂಡಲ ಪಂಚಾಯಿತಿಯಿಂದ ಗ್ರಂಥಾಲಯ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೬೧:- (೪೭೯)
ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ)
ಮಾನ್ಯ ವಯಸ್ಕರ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನಗರ ಸಭೆ ಕಾರ್ಪೊರೇಶನ್ ರವರು ಹಾಗೂ ಮಂಡಲ ಪಂಚಾಯ್ತಿಯವರು ಸಾರ್ವಜನಿಕರಿಂದ ಗ್ರಂಥಾಲಯ ಟ್ಯಾಕ್ಸ್‌ನ್ನು ವಸೂಲ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ವಸೂಲು ಮಾಡುತ್ತಿದ್ದ ಪ್ರತಿಯೊಂದು ಸಂಸ್ಥೆಯವರು ಎಷ್ಟೆಷ್ಟು ಟ್ಯಾಕ್ಸ್‌ನ್ನು ಕಳೆದ ಮೂರು ವರ್ಷಗಳಲ್ಲಿ ವಸೂಲು ಮಾಡಿರುವರು ಮತ್ತು ಅದರಲ್ಲಿ ವಸೂಲು ಮಾಡಿದ ಎಷ್ಟು ಹಣವನ್ನು ಸರ್ಕಾರಕ್ಕೆ ಜಮಾ ಮಾಡಿರುವರು?

ಇ) ಮಂಡಲ ಪಂಚಾಯ್ತಿಯವರು ಗ್ರಂಥಾಲಯ ಟ್ಯಾಕ್ಸ್‌ನ್ನು ವಸೂಲಿ ಮಾಡಿ ಸರ್ಕಾರಕ್ಕೆ ತುಂಬದೇ ಇದ್ದ ಸಂಗತಿ ಸರಕಾರದ ಗಮನಕ್ಕೆ ಬಂದಿದೆಯೇ?

ಈ) ಮಂಡಲ ಪಂಚಾಯ್ತಿ ಹದ್ದಿಯಲ್ಲಿ ಟ್ಯಾಕ್ಸ್‌ನ್ನು ವಸೂಲಿಮಾಡಿ ಆ ಭಾಗದ ಸಾರ್ವಜನಿಕರಿಗೆ ಯಾವುದೇ ಗ್ರಂಥಾಲಯ ಸಹಾಯ ನೀಡದೇ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಪ್ರತಿಯೊಂದು ಮಂಡಲದಲ್ಲಿ ಒಂದಾದರೂ ಮಂಡಲ ಗ್ರಂಥಾಲಯವನ್ನು ಸರ್ಕಾರದವರು ತೆರೆಯುವರೇ?

ಊ) ಕಳೆದ ೩ವರ್ಷಗಳಲ್ಲಿ ಎಷ್ಟು ಮಂಡಲ ಗ್ರಂಥಾಲಯಗಳನ್ನು ತೆರೆಯಲಾಗಿದೆ?

ಋ) ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿ ಮತ್ತು ಸವದತ್ತಿ ತಾಲ್ಲೂಕಿನ ಸುಲಗಟ್ಟಿ ಗ್ರಾಮದಲ್ಲಿ ಮಂಡಲ ಗ್ರಂಥಾಲಯ ಪ್ರಾರಂಭಿಸಲು ಸರಕಾರದವರು ಕ್ರಮ ಕೈಗೊಳ್ಳುವರೆ?